**SC No. 81/2020**
**P.W.4**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 81/2020**

| ಸಾಕ್ಷಿಯ ಹೆಸರು | ಶ್ರೀ ಮುನಿರಾಜು | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಲೇಟ್ ಮುನಿಯಪ್ಪ | 5 | 4 |
| ವಯಸ್ಸು | 47 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **22.05.2026.** | |
| ಉದ್ಯೋಗ | ASI, ಕಗ್ಗಲಿಪುರ ಠಾಣೆ | | |
| ವಾಸ ಸ್ಥಳ | ತಾತಗುಣಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ 2014 ನವೆಂಬರ್ ರಿಂದ 2017 ಆಗಸ್ಟ್‌ರವರೆಗೆ ಮುಖ್ಯ ಪೇದೆಯಾಗಿ ಕೆಲಸ ಮಾಡಿದ್ದೇನೆ. ದಿನಾಂಕ 12.07.2015 ರಂದು ನಾನು ರಾತ್ರಿ ಗಸ್ತು ಕರ್ತವ್ಯಕ್ಕೆ ನೇಮಕವಾಗಿದ್ದು, ರಾತ್ರಿ 9.00 ಗಂಟೆಗೆ ಠಾಣೆ ಬಂದಾಗ, ಪಿಎಸ್‌ಐ ಹರೀಶ್ ರವರು ನನಗೆ ಮತ್ತು ಇತರೆ ಸಿಬ್ಬಂದಿಗಳಾದ ಮಂಜುನಾಥ್, ವಿಶ್ವನಾಥ್, ರವಿ ಟಿ., ನರಿಯಪ್ಪ ಕಂಡೋಜಿ ರವರನ್ನು ಕರೆದು, ರಾಹುಗುಡಲು ಪೈಪ್ ಲೈನ್ ರಸ್ತೆಯಲ್ಲಿ ಯಾರೋ 5 ಜನ ಲಾಂಗ್ ಮತ್ತು ದೊಣ್ಣೆಗಳನ್ನು ಹಿಡಿದುಕೊಂಡು ಸಾರ್ವಜನಿಕರಿಗೆ ಬೆದರಿಕೆ ಹಾಕಿ ಅವರಿಂದ ಹಣ ಮತ್ತು ಒಡವೆಗಳನ್ನು ದೋಚಲು ಹೊಂಚು ಹಾಕುತ್ತಿರುವುದಾಗಿ ಖಚಿತ ಮಾಹಿತಿ ಬಂದಿದ್ದು, ಅದಕ್ಕೆ ದಾಳಿ ಮಾಡಬೇಕೆಂದು ನಮಗೆ ವಿಷಯ ತಿಳಿಸಿದರು.

2. ಅದರಂತೆ ಪಿಎಸ್‌ಐ, ನಾವು ಸಿಬ್ಬಂದಿ ಮತ್ತು ಪಂಚರು ರಾಹುಗುಡಲು ಪೈಪ್ ಲೈನ್ ರಸ್ತೆಗೆ ಸರ್ಕಾರಿ ಜೀಪ್ ನಲ್ಲಿ ರಾತ್ರಿ 9.45 ಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಮರೆಯಲ್ಲಿ ನೋಡಿದಾಗ 5 ಜನರು ಇದ್ದು ಹಾಗೂ ಯಾವುದೋ ಒಂದು ಕಾರನ್ನು ನಿಲ್ಲಿಸಿ ದರೋಡ ಮಾಡುತ್ತಿರುವುದು ಕಂಡು ಬಂತು. ಅವರನ್ನು ಹಿಡಿಯುವಂತೆ ಪಿಎಸ್‌ಐ ರವರು ಮತ್ತು ಸಿಬ್ಬಂದಿಗಳು ಸೇರಿ ದಾಳಿ ಮಾಡಿದ್ದು ನಮ್ಮನ್ನು ನೋಡಿ ಒಬ್ಬ ಆಸಾಮಿ ಓಡಿಹೋದ. ಉಳಿದ 4 ಜನರನ್ನು ಹಿಡಿದುಕೊಂಡೆವು. ಅವರ ಹೆಸರು ವಿಳಾಸ ವಿಚಾರಿಸಲಾಗಿ,

ಮುತ್ತುರಾಜ್, ಮಿಥುನ್, ಅರುಣ್ ಮತ್ತು ವೆಂಕಟೇಶ್ ಎಂದು ತಿಳಿಸಿದರು. ಓಡಿಹೋದವನ ಹೆಸರು ಕೇಳಿದಾಗ ಗುಂಡ @ ಗುಂಡಪ್ಪ ಎಂದು ಹೇಳಿದರು. ಮುತ್ತುರಾಜ್ ಕೈಯಲ್ಲಿ ಕಬ್ಬಿಣದ ಲಾಂಗ್, ಅರುಣ್ ಮತ್ತು ವೆಂಕಟೇಶ್ ರವರ ಕೈಯಲ್ಲಿ ಒಂದೊಂದು ದೊಣ್ಣೆ ಮತ್ತು ಮಿಥುನ್ ಪ್ಯಾಂಟ್ ಜೇಬಿನಲ್ಲಿ ಖಾರದ ಪುಡಿ ಪೊಟ್ಟಣಗಳು ಇದ್ದವು. ಅವರುಗಳು ಎರಡು ಹೀರೋ ಹೊಂಡಾ ಸ್ಪ್ಲೆಂಡರ್ ದ್ವಿಚಕ್ರ ವಾಹನದಲ್ಲಿ ಬಂದಿದ್ದರು. ಸದರಿ ವಸ್ತುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡೆವು. ನಿಶಾನೆ.ಪಿ. 1 ರ ಮಹಜರ್ ನಲ್ಲಿ ನನ್ನ ಸಹಿ ಇದ್ದು ಅದನ್ನು ನಿಶಾನೆ.ಪಿ. 1 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಮು ಮಾ 1 ರಿಂದ 6 ಎಂದು ಗುರುತಿಸಿರುತ್ತಾರೆ. ಸದರಿ ಮೋಟಾರ್ ಸೈಕಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರಾದ ಮಿಥುನ್ ಮತ್ತು ಗುಂಡಪ್ಪನನ್ನು ಸಾಕ್ಷಿ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ಗುರುತಿಸುವ ಬಗ್ಗೆ ವಕೀಲರು ಆಕ್ಷೇಪಣೆ ಇಲ್ಲವೆಂದು ಹೇಳಿರುತ್ತಾರೆ. ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

3. ದಿನಾಂಕ 15.07.2015 ರಂದು ತಲೆಮರಿಸಿಕೊಂಡಿದ್ದ 1 ನೇ ಗುಂಡಪ್ಪನನ್ನು ಪತ್ತೆ ಮಾಡಲು ನನ್ನನ್ನು ಮತ್ತು ಚಾಸಾ. 4 ರವರನ್ನು PSI ರವರು ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರಂತೆ ನಾವು ಸೋಮನಹಳ್ಳಿ, ಬೋಳಾರೆ, ನೆಟ್ಟಿಗೆರೆ ಹಲವು ಕಡೆ ಗಸ್ತು ಮಾಡಿ ನಂತರ ಬಾತ್ಮಿದಾರರಿಂದ ಮಾಹಿತಿ ಕಲೆಹಾಕಿದ್ದು ಆರೋಪಿಯು ಮುನೇಶ್ವರ ದೇವಸ್ಥಾನದ ಬಳಿ ಇರುವುದು ತಿಳಿಸಿದ್ದು ಹಾಗೂ 1 ನೇ ಆರೋಪಿಯನ್ನು ಬೆಳಗ್ಗೆ 9.00 ಕ್ಕೆ ವಶಕ್ಕೆ ಪಡೆದು ಬೆಳಗ್ಗೆ 9.30 ಗಂಟೆಗೆ 1 ನೇ ಆರೋಪಿಯನ್ನು PSI ರವರ ಮುಂದೆ ಹಾಜರು ಪಡಿಸಿರುತ್ತೇನೆ. ಆ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **KPP** ವಕೀಲರಿಂದಃ</u>

1. ರಾಹುಗುಡಲು ರಸ್ತೆಯ ಮುಖ್ಯರಸ್ತೆಯಲ್ಲಿ ಪೈಪ್ ಲೈನ್ ರಸ್ತೆ ಇದೆ ಎಂದರೆ ಸರಿ. ಸೋಮನಹಳ್ಳಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಪೈಪ್ ಲೈನ್ ರಸ್ತೆ ಇದೆ ಎಂದರೆ ಸರಿಯಲ್ಲ. ಬೆಂಗಳೂರಿನಿಂದ ಕನಕಪುರಕ್ಕೆ ಮತ್ತು ಕನಕಪುರದಿಂದ ಬೆಂಗಳೂರಿಗೆ ಹೋಗುವವರು ರಾಹುಗುಡಲಕ್ಕೆ ಹೋಗುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಪಂಚರನ್ನು ಪಿಎಸ್ಐ ಕರೆಸಿದ್ದರು. ನನಗೆ ರಾತ್ರಿ 9 ಗಂಟೆಗೆ ಮಾಹಿತಿ ಬಂತು. ಸ್ಥಳಕ್ಕೆ ಹೋದಾಗ ರಾತ್ರಿ 9.45 ಗಂಟೆಯಾಗಿತ್ತು. ಅವರುಗಳು ಮಾತನಾಡಿಕೊಂಡಿದ್ದು ಸ್ಪಷ್ಟವಾಗಿ

ಕೇಳಿಸಲಿಲ್ಲ. ನಾವು ಸ್ಥಳಕ್ಕೆ ಹೋದಾಗ ಕತ್ತಲಾಗಿತ್ತು ಎಂದರೆ ಸರಿ. ಯಾರು ಯಾರು ಯಾವ ರೀತಿ ಬಟ್ಟೆ ಹಾಕಿದ್ದರು ಎಂದು ಹೇಳಲು ಬರುವುದಿಲ್ಲ. ಯಾರು ಯಾರು ಯಾವ ಆರೋಪಿತರನ್ನು ಹಿಡಿದುಕೊಂಡರು ಎಂದು ನೆನಪಿಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ವಿಷಯ ಗೊತ್ತು. ಪಂಚನಾಮೆಯನ್ನು ಟೈಪ್ ಮಾಡಿದ್ದು, ಅದರಲ್ಲಿ ನನ್ನ ಸಹಿ ಇಲ್ಲ. ನಾನು ಆ ದಿನ ಕರ್ತವ್ಯದಲ್ಲಿ ಇರಲಿಲ್ಲ ಮತ್ತು ದಾಳಿಗೆ ಹೋಗಿಲ್ಲ ಹಾಗೂ ಮೇಲಧಿಕಾರಿಗಳಿಗೆ ಸಹಾಯ ಆಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸೋಮನಹಳ್ಳಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಪೈಪ್ ಲೈನ್ ರಸ್ತೆ ಇದೆ ಹಾಗೂ ಅದರ ಬಲಭಾಗಕ್ಕೆ ಬೆಂಗಳೂರು ಮತ್ತು ಕನಕಪುರ ಮೈನ್ ರಸ್ತೆ ಇದೆ ಎಂದರೆ ಸರಿ. ಅದು National Highway ಎಂದರೆ ಸರಿ. ಅದೇ ಮುಖ್ಯ ರಸ್ತೆಯಲ್ಲಿ ಬೆಂಗಳೂರು ಕನಕಪುರಕ್ಕೆ ಮತ್ತು ಕನಕಪುರದಿಂದ ಬಂಗಳೂರಿಗೆ ಜನ ಓಡಾಡುತ್ತಾರೆ ಎಂದರೆ ಸರಿ. ಆ ಪೈಪ್ ಅನ್ನು ಯಾರು ಓಡಾಡಲು ಬಳಸುವುದಿಲ್ಲ ಎಂದರೆ ಸರಿ. ಘಟನೆ ಬಗ್ಗೆ ಮಾದೇಗೌಡರನ್ನು ವಿಚಾರಣೆ ಮಾಡಿಲ್ಲ. ಆ ದಿನ ಆರೋಪಿತರು ಯಾವ ಯಾವ ಬಟ್ಟೆಗಳನ್ನು ಧರಿಸಿದ್ದರು ಎಂದು ಹೇಳಲು ಬರುವುದಿಲ್ಲ. ಮು.ಮಾ. ಗಳು ಹಳೆಯ ದೊಣ್ಣೆಗಳು ಮತ್ತು ಲಾಂಗ್ ಗಳು ಎಂದರೆ ಸರಿ ಅಲ್ಲ. ಈ ರೀತಿಯ ವಸ್ತುಗಳನ್ನು ಎಲ್ಲಾ ಕಡೆ ಸಿಗುತ್ತವೆ ಎಂದರೆ ಗೊತ್ತಿಲ್ಲ. ಪಂಚರನ್ನು ಯಾರು ಎಲ್ಲಿಂದ ಕರೆದುಕೊಂಡ ಬಂದರು ಎಂದು ಗೊತ್ತಿಲ್ಲ. ನಾನು ಸದರಿ ದಿನ ಕರ್ತವ್ಯದಲ್ಲಿ ಇರಲಿಲ್ಲ ಮತ್ತು ದಾಳಿಯಲ್ಲಿ ಭಾಗವಹಿಸಿರಲಿಲ್ಲ ಎಂದರೆ ಸರಿ ಅಲ್ಲ. ಮಹಜರ್ ನ ಪ್ರಿಂಟ್ ಅನ್ನು ಸ್ಥಳದಲ್ಲಿ ತೆಗೆದರು.

3. ಮಹಜರ್ ಬರೆಯುವ ಕಾಲಕ್ಕೆ ನಾನು ಇದ್ದೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಅದರಲ್ಲಿ ಪ್ರಿಂಟ್ ಅನ್ನು ಅಲ್ಲೆ ತೆಗೆದು ಸಹಿ ಮಾಡಿಸಿದ್ದು ಎಂದರೆ ಸರಿ ಅಲ್ಲ. ಮಹಜರ್ ಅನ್ನು ಠಾಣೆಯಲ್ಲಿ ಮಾಡಿದ್ದು ಅಲ್ಲಿಯೇ ಸಹಿ ಮಾಡಿದ್ದೇನೆ ಎಂರದೆ ಸರಿ ಅಲ್ಲ. 1 ನೇ ಆರೋಪಿ ಪತ್ತೆಗಾಗಿ ಲಿಖಿತ ಆದೇಶ ನೀಡಿಲ್ಲ. 1 ನೇ ಆರೋಪಿಯ ಚಹರೆ ಪಟ್ಟಿ ಕೊಟ್ಟಿದ್ದರು. ಆದರೆ ನನ್ನ ಹೇಳಿಕೆಯಲ್ಲಿ ಆ ಬಗ್ಗೆ ಹೇಳಿಲ್ಲ. 1 ನೇ ಆರೋಪಿ ಆ ದಿನ ಯಾವ ಬಟ್ಟೆ ಧರಿಸಿದ್ದ ಎಂದು ಗೊತ್ತಿಲ್ಲ. ಆರೋಪಿಯನ್ನು ದಸ್ತಗರಿ ಮಾಡಿದ ಬಗ್ಗೆ ಸ್ಥಳದಲ್ಲಿ ಸಹಿ ಪಡೆದಿಲ್ಲ. ನನ್ನನ್ನು ಆ ದಿನ 1 ನೇ ಆರೋಪಿಯ ದಸ್ತಗಿರಿಗಾಗಿ ನೇಮಿಸಿರಲಿಲ್ಲ ಎಂದರೆ

ಸರಿ ಅಲ್ಲ. ಈ ಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲ ಮತ್ತು ಮೇಲಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಹೇಳಿಕ ನೀಡಿಲ್ಲ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.